[Govt. of Karnataka C.R.P. 67]

| Deposition Sheets (RP.No.57) Form No.4 |
|---|

**IN THE COURT OF PRL. CIVIL JUDGE & J.M.F.C., KARKALA.**

**Criminal Case No. 454/2024**

ಪಿ.ಡಬ್ಲ್ಯು : 7 ಸಿ.ಡಬ್ಲ್ಯು : 7

| | | |
|---|---|---|
| ಸಾಕ್ಷಿದಾರನ ಹೆಸರು | : | ಸೈಯದ್ ಇಕ್ಬಾಲ್ |
| ತಂದೆಯ ಹೆಸರು | : | ಸೈಯದ್ ಯೂನಸ್ |
| ಪ್ರಾಯ | : | 52 ವರ್ಷ |
| ಉದ್ಯೋಗ | : | ಬಸ್ಸು ಚಾಲಕ |
| ವಾಸ | : | ಬಂಗ್ಲೆಗುಡ್ಡೆ, ಕಾರ್ಕಳ |

ದಿನಾಂಕ 10-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-**

ಆರೋಪಿತರ ಪರಿಚಯವಿರುವುದಿಲ್ಲ.

ನನ್ನ ಸಮಕ್ಷಮ ಆರೋಪಿತರು ಪ್ರಕರಣಕ್ಕೆ ಸಂಬಂಧಿಸಿದ ದ್ವಿಚಕ್ರ ವಾಹನ ಹಾಗೂ ಕಾರನ್ನು ಠಾಣೆಯಲ್ಲಿ ಹಾಜರುಪಡಿಸಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ಸೊತ್ತು ಸ್ವಾಧೀನತಾ ಮಹಜರು ಮಾಡಿ ಭಾವಚಿತ್ರಗಳನ್ನು ತೆಗೆದು ತಕ್ಷೀರಿಗೆ ಸಂಬಂಧಿಸಿದ ವಾಹನಗಳನ್ನು ಸ್ವಾಧೀನಪಡಿಸಿಕೊಂಡಿರುವುದಿಲ್ಲ.

ಸಾಕ್ಷಿಯು ದಿಃ **19-01-2024** ರಂದು ತಯಾರಿಸಿದ **2** ಸೊತ್ತು ಸ್ವಾಧೀನತಾ ಮಹಜರುಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಸೊತ್ತು ಸ್ವಾಧೀನತಾ ಮಹಜರುಗಳನ್ನು ನಿಪಿ.8 ಮತ್ತು 9 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ.8(ಎ) ಹಾಗೂ ನಿಪಿ.9(ಎ) ಎಂದು ಗುರುತಿಸಲಾಯಿತು. ಸದ್ರಿ ಸಹಿಗಳನ್ನು ಠಾಣೆಯಲ್ಲಿ ಮಾಡಿದ್ದು, ಯಾವ ಕಾರಣಕ್ಕಾಗಿ ಮಾಡಿರುತ್ತೇನೆ ಎಂದು ನೆನಪಿರುವುದಿಲ್ಲ. ಸಾಕ್ಷಿಯು ಸೊತ್ತು ಸ್ವಾಧೀನತಾ ಮಹಜರು ವೇಳೆ ತೆಗದ ಭಾವಚಿತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.10 ಎಂದು ಗುರುತಿಸಲಾಯಿತು. ಯಾವ ಉದ್ದೇಶಕ್ಕಾಗಿ ಭಾವಚಿತ್ರ ತೆಗೆದಿರುತ್ತಾರೆ

ಎಂದು ಗೊತ್ತಿರುವುದಿಲ್ಲ. ಭಾವಚಿತ್ರಕ್ಕೆ ನಿಲ್ಲಲು ಹೇಳಿದ್ದು, ಅದರಂತೆ ಭಾವಚಿತ್ರ ತೆಗೆಸಿಕೊಂಡಿರುತ್ತೇನೆ. ಸಾಕ್ಷಿಯು ತಕ್ಷೀರಿಗೆ ಸಂಬಂಧಿಸಿದ ನಿಪಿ-4 ಮತ್ತು 5 ವಾಹನಗಳ ಭಾವಚಿತ್ರಗಳನ್ನು ನೋಡಿ ಗುರುತಿಸಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

ಪಾಟೀ ಸವಾಲು : ಸಹಾಯಕ ಸರ್ಕಾರಿ ಅಭಿಯೋಜಕರು:-

ದಿಃ 19-01-2024 ರಂದು ಕಾರ್ಕಳ ನಗರ ಪೋಲಿಸ್ ಠಾಣೆಯಲ್ಲಿ 1 ಮತ್ತು 2 ನೇ ಆರೋಪಿತರು ತಕ್ಷೀರಿಗೆ ಸಂಬಂಧಿಸಿದ ಕೆ.ಎ.20-ಇ.ಎಮ್-4818 ನಂಬ್ರದ ಮೋಟಾರು ಸೈಕಲ್ ಹಾಗೂ ಕೆ.ಎ.19-ಜಡ್-5517 ನಂಬ್ರದ ಕಾರನ್ನು ತನಿಖಾಧಿಕಾರಿಯವರ ಮುಂದೆ ಹಾಜರುಪಡಿಸಿದ್ದು, ಅವುಗಳನ್ನು ನನ್ನ ಹಾಗೂ ಚಾಸಾ-8 ರವರ ಸಮಕ್ಷಮ ಸಂಜೆ 4.00 ಗಂಟೆಯಿಂದ 5.30 ರವರೆಗೆ ಸೊತ್ತು ಸ್ವಾಧೀನತಾ ಮಹಜರು ಮುಖೇನ ಭಾವಚಿತ್ರಗಳನ್ನು ತೆಗೆದು, ಮುಂದಿನ ಕ್ರಮಕ್ಕಾಗಿ ತನಿಖಾಧಿಕಾರಿಯವರು ಸ್ವಾಧೀನಪಡಿಸಿಕೊಂಡಿರುತ್ತಾರೆ ಹಾಗೂ ಆ ಉದ್ದೇಶಕ್ಕಾಗಿ ನಮ್ಮ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು : ಆರೋಪಿತರ ಪರ : ಶ್ರೀ. ಎ.ಕೆ.ಹೆಚ್ ವಕೀಲರಿಂದ ಃ ಏನೂ ಇಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ